
ದಯಾಮಮತೆಗಳು ಈ ರೀತಿ ಉಗ್ರತೆಯಾಗಿ ಬದಲಾದುದನ್ನು ಕಂಡು ಯಾತ್ರಿಗಳು ಮೂಕವಿಸ್ಮಿತರಾಗುತ್ತಾರೆ. ಪ್ರಕೃತಿಯ ಮುಸುಕಿನಲ್ಲಡಗಿದ ದೈವತ್ವದ ದರ್ಶನವಿದು.

**ಮಂಗ್ತಿನಾಲಾ:** ಈ ಸ್ಥಳದಿಂದ ಮುಂದೆ ಪಯಣಿಸಲು ಯಾತ್ರಿಗಳು ಕುದುರೆಯನ್ನೂ ಕೂಲಿಗಳನ್ನೂ ಆಯ್ಕೆ ಮಾಡಿಕೊಳ್ಳುತ್ತಾರೆ. **'ಭೋಲಾ ಶಂಕರನಾಥ್'** ಎಂಬ ಘೋಷಣೆಯೊಂದಿಗೆ ಚಾರಣ ಆರಂಭವಾಗುತ್ತದೆ. ಸುತ್ತಲೂ ಮನೋಹರವಾದ ಕಾಡಿನ ದೃಶ್ಯ; ಹಿಮಾಲಯದ ಮೈಮರೆಸುವ ನೋಟ. ಇಡೀ ಹಾದಿಯು ಶಿವನಿಗೆ ಪ್ರಿಯವಾದ ನಾಗಪುಷ್ಪಗಳಿಂದ ತುಂಬಿದೆ. ಇಲ್ಲಿಯ ವಾತಾವರಣದ ಪವಿತ್ರತೆಯು ನಮ್ಮ ಹೃದಯತಂತುವನ್ನು ಮೀಟದೇ ಇರದು. ಇಡೀ ವಿಶ್ವಪ್ರಜ್ಞೆಯ ಅಂತರಾಳವನ್ನೇ ಸ್ಪರ್ಶಿಸುವ, ಗ್ರಹಿಕೆಯನ್ನು ಮೀರಿದ ಅಸೀಮ ಶಾಂತಿಯೊಂದು ಎಲ್ಲರನ್ನೂ ಅಲ್ಲಿ ಆವರಿಸುತ್ತದೆ.

**ಗಾಲ:** ೫ ಗಂಟೆಗಳ ಕಾಲ ನಡೆದು, ೨೦೦೦ ಅಡಿ ಎತ್ತರವನ್ನು ಹತ್ತಿದ ಮೇಲೆ 'ಗಾಲ' ವನ್ನು ತಲಪುತ್ತೇವೆ. ಇದು ಸಮುದ್ರ ಮಟ್ಟದಿಂದ ೮೦೦೦ ಅಡಿ ಎತ್ತರದಲ್ಲಿದೆ. ಹೊರಗಿನ ಹವೆಯಿಂದ ನಮ್ಮನ್ನು ರಕ್ಷಿಸಲು ಅನುವಾಗುವಂತೆ ಭಾರತೀಯ ಕ್ಯಾಂಪಿನವರು ಬೆಚ್ಚಗಿನ ಹಾಸಿಗೆ ಹೊದಿಕೆಗಳನ್ನು ನೀಡುತ್ತಾರೆ. ಬಿಸಿ ರೊಟ್ಟಿ, ಪಲ್ಯ, ತೊವ್ವೆ ಮತ್ತು ಅನ್ನ ಯಾತ್ರಿಗಳಿಗಾಗಿ ಸಿದ್ಧವಾಗಿರುತ್ತದೆ. ಹೀಗೆ ಅವರಿಗೆ ಸಾಧ್ಯವಾದಷ್ಟೂ ಅನುಕೂಲಗಳನ್ನು ಒದಗಿಸಲಾಗುವುದು. ಸಂಜೆಯ ಪ್ರಾರ್ಥನೆಯಲ್ಲಿ ಯಾತ್ರಿಗಳು ಮಗ್ನರಾಗುತ್ತಾರೆ. ಮರುದಿನ ಮುಂದಿನ ಕಷ್ಟಕರ ಹಾದಿಯನ್ನು ಕ್ರಮಿಸಲು ಅವರೆಲ್ಲ ಸಿದ್ಧರಾಗಬೇಕು. ಒರಟಾದ ಸಮವಿಲ್ಲದ ಕಲ್ಲಿನಿಂದಾದ ೪೪೦೦ ಮೆಟ್ಟಿಲುಗಳನ್ನಿಳಿದು, ೧೮ ಕಿಲೋಮೀಟರುಗಳಷ್ಟು ಉದ್ದದ ಕಡಿದಾದ ಹಾದಿಯಲ್ಲಿ ನಡೆಯಬೇಕಿದೆ. ಅದರ ಪಕ್ಕದಲ್ಲೇ ಕಾಳಿ ನದಿ ರಭಸದಿಂದ ಹರಿಯುತ್ತದೆ.


ಕಾಳಿ ನದಿಯ ದಡದಲ್ಲಿ

ಹಾದಿಯಲ್ಲಿ ನಮ್ಮನ್ನು ಮಂಜುಮುಸುಕಿದ ಮೋಡಗಳು ಆವರಿಸುತ್ತವೆ. ಅಂಜಿಕೆ ಹುಟ್ಟಿಸಿದರೂ ಇದೊಂದು ವರ್ಣಿಸಲಾಗದ ಉಲ್ಲಾಸಕರ ಅನುಭವ. ಜೀವಕ್ಕೇ ಕುತ್ತಾಗಬಹುದಾದ ಅನಿಶ್ಚಿತ ಸಂದರ್ಭಗಳ ಬಗ್ಗೆ ಎಚ್ಚರ ವಹಿಸುತ್ತಾ ಕಾಳಿ ನದಿಗುಂಟ ಅಪಾಯಕರ ಹಾದಿಯಲ್ಲಿ ಎಚ್ಚರಿಕೆಯಿಂದ ನಡೆಯುತ್ತೇವೆ. ಸಾಲಾಗಿರುವ ಭತ್ತದ ಗದ್ದೆಗಳ, ಫಲಭರಿತ ಸೇಬುಹಣ್ಣಿನ ಮತ್ತು ಅಕ್ರೋಟು ಗಿಡಗಳ ನಡುವೆ ನಮ್ಮ ಹಾದಿ ಸಾಗುತ್ತದೆ. ಇಲ್ಲಿ ಬಂಡೆಗಳ ಸಂದಿನಿಂದ ಅದೆಷ್ಟೋ ಬಗೆಯ ಹೂವುಗಳು ಇಣುಕಿ ನೋಡುತ್ತಿದ್ದವು. ಸ್ಫಟಿಕದಂತೆ ಸ್ವಚ್ಛವಾದ ನೀರಿನಲ್ಲಿ ನದಿಯ ತಳವನ್ನು ಕಾಣಬಹುದಾಗಿತ್ತು. ಖನಿಜಗಳಿಂದ ಸಮೃದ್ಧವಾದ, ಕಲುಷಿತವಲ್ಲದ ಶುದ್ಧ ನೀರು ಅದು. ಮುಂದೆ ಸಾಗಿದಂತೆ ಎಲ್ಲೆಲ್ಲೂ ನೀರು ಒಸರುವುದನ್ನು ಕಾಣುತ್ತೇವೆ. ನಮಗೆ ಎದುರಾದ ಮತ್ತೊಂದು ಕುತೂಹಲಕರ ದೃಶ್ಯವೆಂದರೆ ಛತ್ರಿ ಚಿಲುಮೆಯದು. ಇದು ಯಾತ್ರಿಕರ ಆಯಾಸವನ್ನು ಪರಿಹರಿಸಿ ಅವರಲ್ಲಿ ಮತ್ತೆ ಉತ್ಸಾಹವನ್ನು, ನವಚೇತನವನ್ನು ತುಂಬುತ್ತದೆ. ಮತ್ತೆ ಸ್ವಲ್ಪ ಸಮಯದಲ್ಲೇ ಆ ಪ್ರದೇಶದಲ್ಲಿ ಹವಾಮಾನವು ಬದಲಾಗುತ್ತದೆ. ಮೊದಮೊದಲು ಸಾಧಾರಣ ಬೆಚ್ಚಗಿನ ಉಡುಪುಗಳು ಸಾಕಾಗುವಂತೆ ಅನಿಸುತ್ತದೆ. ವಿಪರೀತ ಚಳಿ ಶುರುವಾದಾಗ ಇನ್ನೂ ಬೆಚ್ಚಗಿನ ಉಡುಪು ಬೇಕೆಂದು, ಅವನ್ನು ಧರಿಸಿದ ಸ್ವಲ್ಪ ಸಮಯದಲ್ಲೇ ಧಗೆ ಎನಿಸುತ್ತದೆ; ಹಾಕಿದ್ದ ಹೆಚ್ಚಿನ ಅರಿವೆಗಳನ್ನು ಕಳಚಿಡಬೇಕೆನಿಸುತ್ತದೆ!



ಗಾಲಾ ಕ್ಯಾಂಪಿನಲ್ಲಿ

(ಮುಂದುವರಿಯುವುದು)



ಸ್ವಾಮಿ ಭಜನಾನಂದ

# ಆಧುನಿಕ ಕಾಲದ ನೂತನ ಮಾನವ: ಶ್ರೀರಾಮಕೃಷ್ಣ

ಹಿಂದಿನ ಸಂಚಿಕೆಯಿಂದ

ಅವತಾರರೂಪದಲ್ಲಿ ಮಾನವಾಕೃತಿಯನ್ನು ಭಗವಂತನು ಧರಿಸುತ್ತಾನೆ. ಇದರ ಮಹತ್ವ ಹೀಗಿದೆ: ಭಗವಂತನೆಂಬ ಶುದ್ಧತತ್ತ್ವದ ಅಭಿವ್ಯಕ್ತಿಯ ಹಲವಾರು ವಿಧಾನಗಳಲ್ಲಿ ಇದೂ ಒಂದು. ೧೯ ನೆಯ ಶತಮಾನದ ಜರ್ಮನ್ ತತ್ತ್ವಶಾಸ್ತ್ರಜ್ಞನಾದ ಇಮ್ಯಾನುಯಲ್ ಕ್ಯಾಂಟ್ ಸತ್ಯತತ್ತ್ವಕ್ಕೆ (Reality) ಎರಡು ಮುಖಗಳಿವೆ ಎನ್ನುತ್ತಾನೆ. ಮೊದಲನೆಯದು ವ್ಯಕ್ತವಾದುದು (Phenomenon). ಅದನ್ನು ಇಂದ್ರಿಯಗಳ ಮೂಲಕ ಗ್ರಹಿಸಬಹುದು. ಎರಡನೆಯದು ಅವ್ಯಕ್ತವಾದುದು. ಇದು ಇಂದ್ರಿಯಾತೀತವಾದುದು. ಇದನ್ನೇ ತಾತ್ತ್ವಿಕ ಪರಿಭಾಷೆಯಲ್ಲಿ **ಶುದ್ಧತತ್ತ್ವ** (Noumenon) ಎಂದು ಕರೆಯುತ್ತಾರೆ. ಕ್ಯಾಂಟ್ ಮಹಾಶಯನ ಪ್ರಕಾರ, ಶುದ್ಧತತ್ತ್ವವೆಂಬುದು ತನ್ನಲ್ಲೇ ತಾನು ಇರುವ ಲಕ್ಷಣವುಳ್ಳದ್ದು (Thing-in-itself). ಅದು ಎಂದಿಗೂ ಅಜ್ಞಾತವಾಗಿಯೇ ಇರುತ್ತದೆ ಎನ್ನುತ್ತಾನೆ ಕ್ಯಾಂಟ್. ವೇದಾಂತದ ಪರಿಭಾಷೆಯಲ್ಲಿ ಈ ಪರಿಶುದ್ಧ ತತ್ತ್ವವನ್ನು **'ಬ್ರಹ್ಮನ್'** ಎಂದು ಕರೆಯುತ್ತಾರೆ. ಇದು ಸಾಧಾರಣವಾಗಿ ನಾವು ಮಾಡುವ ಆಲೋಚನೆಗಳು ಮತ್ತು ಮಾತುಗಳಿಗೆ ಅತೀತವಾಗಿರುತ್ತದೆ. ಬ್ರಹ್ಮವು ಎಲ್ಲ ರೀತಿಯಿಂದಲೂ ಇಂದ್ರಿಯಾತೀತವಾಗಿಯೇ ಇರುತ್ತದೆ ಎಂದಾದರೆ, ಅದನ್ನು ತಿಳಿದುಕೊಳ್ಳುವ ಬಗೆಯಾದರೂ ಹೇಗೆ? ಇದಕ್ಕೆ ಉತ್ತರವನ್ನು ಹೀಗೆ ನೀಡಬಹುದು: ಬ್ರಹ್ಮವನ್ನು ಒಂದು ಬಾಹ್ಯವಸ್ತುವಿನಂತೆ ನೇರವಾಗಿ ಗ್ರಹಿಸಲು ಸಾಧ್ಯವಿಲ್ಲ. ಅದು ಎಲ್ಲರಿಗೂ, ತಾನಾಗಿಯೇ ಮೂರು ಪ್ರಕಾರಗಳಲ್ಲಿ ಪ್ರಕಟಗೊಳ್ಳುತ್ತದೆ. **ಮೊದಲನೆಯದಾಗಿ,** ಪ್ರತಿಯೊಬ್ಬನೂ ತನ್ನ 'ಇರುವಿಕೆ'ಯ ಬಗ್ಗೆ ತಿಳಿದುಕೊಂಡೇ ಇರುತ್ತಾನೆ. ಸ್ವಂತ ಅಸ್ತಿತ್ವದ ವಿಷಯದಲ್ಲಿ ಯಾರೂ ಸಂದೇಹಪಡಲು ಸಾಧ್ಯವಿಲ್ಲ. ಸ್ವಯಂಸಾಕ್ಷಿಯ ಲಕ್ಷಣವುಳ್ಳ ಈ ಬಗೆಯ ಅಪರೋಕ್ಷಾನುಭವಕ್ಕೆ ಬೇರೆ ಯಾವ ಪುರಾವೆಯ ಅಗತ್ಯವೂ ಇಲ್ಲ. ಶ್ರೀಶಂಕರಾಚಾರ್ಯರ ಪ್ರಕಾರ, ಈ ಬಗೆಯ ಅನುಭವದ ಮೂಲವಿರುವುದು, ನಾವು ಯಾವ ಅನುಭವವನ್ನು ಪಡೆಯಲು ಹೊರಟಿದ್ದೇವೆಯೋ ಆ ಬ್ರಹ್ಮನಲ್ಲಿಯೇ. (ಅಂದರೆ ಜ್ಞಾತ, ಜ್ಞಾನ, ಜ್ಞೇಯ - ಮೂರೂ ಒಂದೇ –ಸಂ.)

**ಎರಡನೆಯ ವಿಧಾನವೆಂದರೆ** ಬ್ರಹ್ಮವು ಇನ್ನೂ ಎರಡು ಬಗೆಗಳ ಮೂಲಕ ಪ್ರಕಟಗೊಳ್ಳುವುದು: ಒಂದು ಶಬ್ದಗಳ ಮೂಲಕ; ಇನ್ನೊಂದು ಪ್ರತೀಕ ಅಥವಾ ವಿಗ್ರಹಗಳ ಮೂಲಕ. ಶಬ್ದಗಳ ಮೂಲಕ ಬ್ರಹ್ಮವು ಅಭಿವ್ಯಕ್ತವಾಗುವುದನ್ನು 'ಶ್ರುತಿ' ಎಂದು ಕರೆಯುತ್ತಾರೆ. ಉಪನಿಷತ್ತುಗಳು ಈ ಬಗೆಯ ಶ್ರುತಿಗಳ ಅಧಿಕೃತ ದಾಖಲೆಗಳು. ಉಪನಿಷತ್ತುಗಳಲ್ಲಿ ಇರುವ ಬಹುತೇಕ ಹೇಳಿಕೆಗಳು ಬ್ರಹ್ಮನ ಪರೋಕ್ಷಜ್ಞಾನವನ್ನೇ ವಿವರಿಸುವಂಥವು. ಆದರೆ ಮಹಾವಾಕ್ಯಗಳೆಂದು ಕರೆಯಲಾಗುವ ಕೆಲವು ನಿರ್ದಿಷ್ಟ ಮಂತ್ರಗಳು, ಶ್ರೇಷ್ಠ ದರ್ಜೆಯ ಒಬ್ಬ ಆಧಿಕಾರಿಕ ಪುರುಷನಲ್ಲಿ ಬ್ರಹ್ಮನ ಅಪರೋಕ್ಷಾನುಭವಕ್ಕೆ ಎಡೆಮಾಡಿಕೊಡಬಲ್ಲವು. ಹೀಗೆ ಶಬ್ದಗಳ ಮೂಲಕ ಅಪರೋಕ್ಷಾನುಭೂತಿಯುಂಟಾಗುವ ವಿಧಾನಕ್ಕೆ **'ಶಬ್ದಾಪರೋಕ್ಷ'** ಎಂದು ಹೆಸರು.

ಬ್ರಹ್ಮವು ತಾನೇತಾನಾಗಿ ಪ್ರಕಟಗೊಳ್ಳುವ **ಮೂರನೆಯ ವಿಧಾನವೆಂದರೆ 'ಅವತಾರಗಳು'** ಎಂದು ಹೇಳಬಹುದು. "ಭಗವಂತನ ಅವತಾರವನ್ನು ದರ್ಶಿಸುವುದೂ ಒಂದೇ, ಸಾಕ್ಷಾತ್ ಭಗವಂತನನ್ನು ಕಾಣುವುದೂ ಒಂದೇ" ಎನ್ನುತ್ತಾರೆ ಶ್ರೀರಾಮಕೃಷ್ಣರು. ಒಂದು ದಿನ ನರೇಂದ್ರ (ಮುಂದೆ ಸ್ವಾಮಿ ವಿವೇಕಾನಂದರು) ಬಂಗಾಳದ ಪ್ರಸಿದ್ಧ ನಾಟಕಕಾರನಾದ ಗಿರೀಶ್‌ಚಂದ್ರ ಘೋಷನೊಂದಿಗೆ, "ಭಗವಂತನು ಅನಂತವಾಗಿರುವುದರಿಂದ ಅವನನ್ನು ಅರಿತುಕೊಳ್ಳಲು ಸಾಧ್ಯವೇ ಇಲ್ಲ" ಎಂದು ವಾದಿಸುತ್ತಾನೆ. ಈ ವಾದವನ್ನು ಕುರಿತು ಶ್ರೀರಾಮಕೃಷ್ಣರು ಹೀಗೆ ಹೇಳುತ್ತಾರೆ: "ಭಗವಂತನ ಬಗ್ಗೆ ಎಲ್ಲವನ್ನೂ ತಿಳಿದುಕೊಳ್ಳುವುದರ ಆವಶ್ಯಕತೆಯಾದರೂ ಎಲ್ಲಿದೆ? ಆತನ ಸಾಕ್ಷಾತ್ಕಾರವನ್ನು ಪಡೆದರೆ, ಅದೇ ಸಾಕಷ್ಟಾಯಿತು. ಇದಲ್ಲದೆ, ನಾವು ಅವನ ಅವತಾರವನ್ನು ಕಂಡರೆ ಸಾಕು, ಅವನನ್ನೇ ನೋಡಿದ ಹಾಗೆ. ಒಬ್ಬ ವ್ಯಕ್ತಿ ಗಂಗೆಯ ಹತ್ತಿರ ಹೋಗಿ, ಅದರ ನೀರನ್ನು ಮುಟ್ಟುತ್ತಾನೆ ಎಂದುಕೊಳ್ಳಿ. ಅನಂತರ ಅವನು ಹೇಳುತ್ತಾನೆ, 'ಹೌದು, ನಾನು ಗಂಗೆಯನ್ನು ನೋಡಿದ್ದೇನೆ. ಗಂಗೆಯ

ಸ್ಪರ್ಶವನ್ನು ಮಾಡಿದ್ದೇನೆ' ಎಂದು. ಈ ರೀತಿ ಘೋಷಿಸಲು ಅವನು, ಹರಿದ್ವಾರದಿಂದ ಗಂಗಾಸಾಗರದವರೆಗೆ, ನದಿಯ ಉದ್ದಗಲವನ್ನೂ ಮುಟ್ಟಿನೋಡುವ ಅಗತ್ಯವಿಲ್ಲ, ತಾನೇ."

ಸರಿಸುಮಾರು ಇದೇ ಭಾವನೆಯನ್ನು ನಾವು ಬೈಬಲ್‌ನ ಹೊಸ ಒಡಂಬಡಿಕೆಯಲ್ಲಿಯೂ ಕಾಣಬಹುದಾಗಿದೆ. ಒಂದು ದಿನ ಕ್ರಿಸ್ತನ ಶಿಷ್ಯರಲ್ಲಿ ಒಬ್ಬನಾದ ಫಿಲಿಪ್ ಏಸುವನ್ನು ಹೀಗೆ ಬೇಡಿಕೊಳ್ಳುತ್ತಾನೆ: "ಪ್ರಭು, ದಯವಿಟ್ಟು ಭಗವಂತನಾದ ತಂದೆಯನ್ನು ನಮಗೆ ತೋರಿಸು. ಇದರಿಂದ ನಾವು ಸಾರ್ಥಕತೆಯನ್ನು ಪಡೆಯುವಂತಾಗಲಿ." ಅದಕ್ಕೆ ಉತ್ತರರೂಪವಾಗಿ ಏಸುಕ್ರಿಸ್ತನು ಹೇಳುವ ಮಾತು ಬಹಳ ಮಾರ್ಮಿಕವಾಗಿದೆ: "ನೀನು ನನ್ನ ಸಂಗಡ ಇಷ್ಟೊಂದು ದೀರ್ಘಕಾಲ ಇದ್ದೀಯೆ. ಆದರೂ, ಓ ನನ್ನ ಫಿಲಿಪ್, ನನ್ನ ಬಗ್ಗೆ ನೀನು ಇನ್ನೂ ಅರಿತುಕೊಂಡಿಲ್ಲವಲ್ಲ! ಯಾರು ನನ್ನನ್ನು ನೋಡಿರುವರೋ, ಅವರು ನನ್ನ ತಂದೆಯನ್ನೂ ಕಂಡಿರುವರು. ಹೀಗಾಗಿ ನನ್ನ ತಂದೆಯನ್ನು ತೋರಿಸು ಎಂದು ಹೇಗೆ ತಾನೇ ಕೇಳುತ್ತಿದ್ದೀಯೆ?"

**ಇಷ್ಟದೇವತೆಯಾಗಿ ಅವತಾರ : 'ಇಷ್ಟದೇವತಾ ಪರಿಕಲ್ಪನೆ'**ಯೆಂಬುದು ಹಿಂದೂಧರ್ಮದ ಒಂದು ವಿಶಿಷ್ಟ ಅಂಶ. ಬೇರೆ ಧರ್ಮಗಳಲ್ಲಿ ಅದು ಕಾಣಬರುವುದಿಲ್ಲ. ಹಿಂದೂಧರ್ಮವು ವೈವಿಧ್ಯಮಯ ಮತಗಳು, ಪಂಗಡಗಳು ಮತ್ತು ಸಂಪ್ರದಾಯಗಳನ್ನು ತನ್ನ ತೆಕ್ಕೆಯಲ್ಲಿ ಬರಮಾಡಿಕೊಳ್ಳುವ ಅಪೂರ್ವ ಸಾಮರ್ಥ್ಯವನ್ನು ಹೊಂದಿದೆ. ಹಾಗೆಯೇ ಇದು ಇತರ ಧರ್ಮಗಳಿಗೆ, ನಾಸ್ತಿಕ ತತ್ತ್ವವನ್ನು ಪ್ರತಿಪಾದಿಸುವ ಮತಗಳಿಗೆ ಕೂಡ, ಸ್ಥಾನವನ್ನು ಕಲ್ಪಿಸಿಕೊಡಬಲ್ಲ ಔದಾರ್ಯತೆಯನ್ನು ಕೂಡ ಮೆರೆದಿದೆ. ಇದಕ್ಕೆ ಮುಖ್ಯ ಕಾರಣ, ಅಖಂಡವಾದ ಹಿಂದೂ ಜೀವನದೃಷ್ಟಿ. ಇದರ ಆಧಾರವಿರುವುದು **'ವಿವಿಧತೆಯಲ್ಲಿ ಏಕತೆ'** ಎಂಬ ತತ್ತ್ವದಲ್ಲಿ. ಇದೇ ಇಷ್ಟದೇವತಾ ಪರಿಕಲ್ಪನೆಯ ಮೂಲಕ ಸಾಂಕೇತಿಕ ರೂಪವನ್ನು ಪಡೆದುಕೊಂಡಿದೆ.

**ಇಷ್ಟದೇವತಾಕಲ್ಪನೆಯೆಂದರೆ ಏನು**? 'ಭಗವಂತನು ಒಬ್ಬನೇ; ಆದರೂ ಅವನು ವಿವಿಧರೂಪಗಳನ್ನು ಧರಿಸಬಲ್ಲನು' ಎನ್ನುವ ಶ್ರದ್ಧೆ; ಹಾಗೆಯೇ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಮನೋಭಾವಕ್ಕೆ ಅಥವಾ ಆಧ್ಯಾತ್ಮಿಕ ಒಲವಿಗೆ ಅನುಗುಣವಾಗಿ ಆ ರೂಪಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು ಎಂಬ ದೃಢವಿಶ್ವಾಸ. ಒಬ್ಬನು ದೇವತಾರೂಪಗಳಾದ ಶಿವ, ವಿಷ್ಣು, ಸರಸ್ವತಿ, ಕಾಳಿ ಮುಂತಾದವುಗಳಲ್ಲಿ ಯಾವುದಾದರೊಂದನ್ನು ತನ್ನ ಇಷ್ಟದೇವತೆಯಾಗಿ ಆಯ್ಕೆ ಮಾಡಿಕೊಳ್ಳಬಹುದು. ಅಥವಾ ಅವತಾರಗಳಾದ ರಾಮ, ಕೃಷ್ಣ ಮತ್ತಿತರರಲ್ಲಿ ಒಬ್ಬನನ್ನು ಆರಾಧಿಸಬಹುದು. ಇದನ್ನೇ ಒಬ್ಬ ವ್ಯಕ್ತಿಯ 'ಇಷ್ಟದೇವತೆ' ಎನ್ನುವುದು. ಒಬ್ಬ ತಾನು ಇಷ್ಟಪಡುವ ಅಥವಾ ಆರಿಸಿಕೊಳ್ಳುವ 'ದೇವ' ಅಥವಾ 'ದೇವಿ' ಎನ್ನುವುದೇ 'ಇಷ್ಟದೇವತೆ' ಎನ್ನುವ ಪದದ ಅರ್ಥ. ಇಷ್ಟದೇವತೆಯನ್ನು ಪೂರ್ಣಬ್ರಹ್ಮಸ್ವರೂಪವನ್ನಾಗಿ ಅಥವಾ ಪರಮಾತ್ಮನ ಅಭಿವ್ಯಕ್ತಿಗಳಲ್ಲಿ ಒಂದನ್ನಾಗಿ ಪೂಜಿಸಬಹುದು. ಆ ನಿರ್ದಿಷ್ಟ ದೇವತಾಸ್ವರೂಪದೊಂದಿಗೆ ಭಕ್ತನು ಇಟ್ಟುಕೊಳ್ಳಬೇಕಾದ ಉತ್ಕಟ ಆತ್ಮೀಯ ಸಂಬಂಧವೇ ಇಲ್ಲಿ ಮುಖ್ಯವಾದುದು.

ಆ ಇಷ್ಟದೇವತೆಯೇ ಸಾಧಕನಿಗೆ ತನ್ನ ಸರ್ವಸ್ವವೂ ಆಗಿಬಿಡುತ್ತದೆ. ಆತನ ಆಲೋಚನೆಗಳು, ಭಾವನೆಗಳು, ದೃಷ್ಟಿಕೋನ, ಇತರರೊಡನೆ ಅವನು ಇರಿಸಿಕೊಳ್ಳುವ ಸಂಬಂಧ, ಅವನ ಎಲ್ಲಾ ರೀತಿಯ ಚಟುವಟಿಕೆಗಳು – ಇವೆಲ್ಲವನ್ನೂ ಆ ಇಷ್ಟದೇವತೆಯು ವ್ಯಾಪಿಸಿಬಿಡುತ್ತಾನೆ. **ನಾಥ ತುಮಿ, ಸರ್ವಸ್ವ ಆಮಾರ್** – "ನೀನು ನನ್ನ ಸ್ವಾಮಿಯಾಗಿದ್ದೀಯೆ, ನನ್ನ ಸರ್ವಸ್ವವೂ ಆಗಿದ್ದೀಯೆ" ಎಂದು ಆರಂಭವಾಗುವ ಸುಂದರವಾದ ಬಂಗಾಳಿ ಗೀತೆಯೊಂದರಲ್ಲಿ ಈ ಅಪೂರ್ವ ಭಾವನೆ ಮನೋಹರ ವಾಗಿ ಮೂಡಿಬಂದಿದೆ. ಈ ಗೀತೆಯನ್ನು ಸ್ವಾಮಿ ವಿವೇಕಾನಂದರು, ಶ್ರೀರಾಮಕೃಷ್ಣರೆದುರು ಹಾಡುತ್ತಿದ್ದರು.

ಇಷ್ಟದೇವತೆಯ ಪರಿಕಲ್ಪನೆಯ ಮೂಲವಿರುವುದು ವೈದಿಕ ಕಾಲದಲ್ಲಿ. ವೇದಕಾಲದ ಆರ್ಯರು ಇಂದ್ರ, ಮಿತ್ರ, ವರುಣ, ಆದಿತ್ಯ, ವಿಷ್ಣು, ರುದ್ರ ಮತ್ತಿತರ ಹಲವಾರು ದೇವತಾಸ್ವರೂಪಗಳನ್ನು ಪೂಜಿಸುತ್ತಿದ್ದರು. ಹೀಗೆಂದು ವೈದಿಕ ಧರ್ಮವು 'ಬಹುದೇವತಾವಾದ'ವನ್ನು ಪ್ರತಿಪಾದಿಸುತ್ತದೆ ಎಂದು ಹೇಳಲಾಗದು. ಏಕೆಂದರೆ ವೈದಿಕ ಋಷಿಗಳು, ಆ ಪ್ರತಿಯೊಂದು ದೇವತೆಯೂ ಏಕಮೇವ ಪರಬ್ರಹ್ಮನ ಅಭಿವ್ಯಕ್ತಿಗಳು ಎಂದು ಸಾಕ್ಷಾತ್ಕರಿಸಿಕೊಂಡಿದ್ದರು. ಈ ಪರಿಜ್ಞಾನವು **'ಏಕಂ ಸತ್ ವಿಪ್ರಾ ಬಹುಧಾ ವದಂತಿ'** – 'ಸತ್ಯ ಒಂದೇ, ಋಷಿಗಳು ಅದನ್ನು ವಿವಿಧ ಹೆಸರುಗಳಿಂದ ಕರೆಯುತ್ತಾರೆ' ಎನ್ನುವ ಪ್ರಸಿದ್ಧ ವೇದೋಕ್ತಿ ಯಲ್ಲಿ ಸ್ಪಷ್ಟವಾಗಿ ಮೂಡಿಬಂದಿರುವುದನ್ನು ಕಾಣಬಹುದು. ೧೯ನೆಯ ಶತಮಾನದ ಪೌರಸ್ತ್ಯಶಾಸ್ತ್ರಜ್ಞರಾದ ಮ್ಯಾಕ್ಸ್‌ಮುಲರ್ ಈ ಬಗೆಯ ಪೂಜಾವಿಧಾನವನ್ನು Henotheism ಎಂದು ಕರೆಯುತ್ತಾರೆ. ಮೆರಿಯಮ್ ವೆಬ್‌ಸ್ಟರ್ ಇಂಗ್ಲಿಷ್ ನಿಘಂಟಿನ ಪ್ರಕಾರ ಇದರ ಅರ್ಥ ಹೀಗಿದೆ: **'ಇತರ ದೇವತೆಗಳ ಅಸ್ತಿತ್ವವನ್ನು ನಿರಾಕರಿಸದೆಯೇ ಒಬ್ಬನೇ ದೇವತೆಯನ್ನು ಉಪಾಸನೆ ಮಾಡುವುದು.'**

ಇಷ್ಟದೇವತೆಯೆಂದರೆ, ಪರಬ್ರಹ್ಮನ ಸಂಕೇತ ಮಾತ್ರವಲ್ಲ, ಆತನ ನೈಜ ಅಭಿವ್ಯಕ್ತಿ. ಶ್ರೀರಾಮಕೃಷ್ಣರು ಮತ್ತೆ ಮತ್ತೆ, "ನಿರಾಕಾರನು ಹೇಗೋ ಹಾಗೆಯೇ ಸಾಕಾರನೂ ಸತ್ಯವೇ" ಎಂಬ ಮಾತನ್ನು ಒತ್ತಿ ಒತ್ತಿ ಹೇಳುತ್ತಿದ್ದರು. ನಿರಾಕಾರ ಮತ್ತು ಸಾಕಾರ ದೇವತಾರೂಪಗಳ ನಡುವಣ ಸಂಬಂಧವನ್ನು ಅವರು ಹೀಗೆ ವಿವರಿಸಿ ಹೇಳುತ್ತಾರೆ: "ನಾನು ಹೇಳುವುದು ಏನೆಂದು ನಿನಗೆ ಅರ್ಥವಾಗುತ್ತಿದೆಯೇನು? ಸಚ್ಚಿದಾನಂದ ಎಂದರೆ ಎಣೆಯಿಲ್ಲದ ಸಾಗರದಂತೆ. ಅತಿಯಾದ ಶೀತವು ನೀರನ್ನು ಮಂಜುಗಡ್ಡೆಯನ್ನಾಗಿ

ಮಾಡುತ್ತದೆ. ಆ ಮಂಜುಗಡ್ಡೆಯು ಹಲವಾರು ಆಕಾರಗಳನ್ನು ತಳೆದು ಸಾಗರದ ಮೇಲೆ ತೇಲುತ್ತದೆ. ಹೀಗೆಯೇ ಭಕ್ತಿಯ ಶೀತಲ ಸಂಸ್ಪರ್ಶದಿಂದ ಸಚ್ಚಿದಾನಂದ ಸಾಗರದಲ್ಲಿ ಹಲವಾರು ದೇವತಾರೂಪಗಳನ್ನು ನಾವು ಕಾಣಬಹುದು. ಈ ರೂಪಗಳೆಲ್ಲ ಇರುವುದು ಭಕ್ತರ ಸಲುವಾಗಿ. ಆದರೆ ಜ್ಞಾನಸೂರ್ಯ ಉದಯಿಸಿದಾಗ, ಮಂಜು ಕರಗುತ್ತದೆ; ಮುಂಚಿನಂತೆಯೇ ಅದು ನೀರಾಗಿಬಿಡುತ್ತದೆ."

ಬಂಗಾಳ ವೈಷ್ಣವ ಮತದಲ್ಲಿ ಶ್ರೀಕೃಷ್ಣನ ಸ್ವರೂಪವನ್ನು ಅನಂತವೆಂದು ಪರಿಗಣಿಸುತ್ತಾರೆ. ಈ ಸಂಪ್ರದಾಯದ ಪ್ರಕಾರ, ಸತ್ಯತತ್ತ್ವದ ಅತ್ಯುಚ್ಚ ಇಂದ್ರಿಯಾತೀತ ನೆಲೆಯೆಂದರೆ, ಗೋಕುಲ – ಶ್ರೀಕೃಷ್ಣನ ನಿತ್ಯಧಾಮ. ಅದು ಪರಿಶುದ್ಧ ಚೈತನ್ಯದ ಸ್ವಭಾವವುಳ್ಳದ್ದು. ಈ ನಿತ್ಯಧಾಮದಲ್ಲಿ, ನಿತ್ಯಕೃಷ್ಣನು ನಿತ್ಯ ರಾಸಲೀಲೆಯನ್ನಾಡುತ್ತ ದಿವ್ಯಕ್ರೀಡೆಯಲ್ಲಿ ಮುಳುಗಿರುತ್ತಾನೆ. ಒಬ್ಬ ವೈಷ್ಣವ ಭಕ್ತನ ಆತ್ಯಂತಿಕ ಗುರಿಯೆಂಬುದು ಮುಕ್ತಿಯನ್ನು ಪಡೆಯುವುದಲ್ಲ, ಈ ನಿತ್ಯ ದಿವ್ಯಕ್ರೀಡೆಯಲ್ಲಿ ನಿರಂತರವಾಗಿ ಭಾಗವಹಿಸುವುದರಿಂದ ದೊರಕುವ ಇಂದ್ರಿಯಾತೀತ ಆನಂದವನ್ನು ಸರ್ವದಾ ಪಡೆದುಕೊಳ್ಳುವುದು. ಇದನ್ನು ಸ್ಪಷ್ಟಪಡಿಸುತ್ತ, ಶ್ರೀರಾಮಕೃಷ್ಣರು ಹೀಗೆ ಹೇಳುತ್ತಾರೆ: "ಭಕ್ತನಿಗೆ ನಿರ್ವಾಣದ ಆವಶ್ಯಕತೆಯಿದೆಯೆಂದು ಹೇಳಲಾಗದು. ಕೆಲವು ಶಾಸ್ತ್ರಗ್ರಂಥಗಳ ಪ್ರಕಾರ, ಒಬ್ಬ ನಿತ್ಯ ಕೃಷ್ಣ ಇದ್ದಹಾಗೆ, ಆತನ ನಿತ್ಯಭಕ್ತರೂ ಇರುತ್ತಾರೆ. ಕೃಷ್ಣನೆಂದರೆ ಚೈತನ್ಯಘನಸ್ವರೂಪ. ಕೃಷ್ಣನು ಹೇಗೆ ನಿತ್ಯನೋ, ಹಾಗೆಯೇ ಅವನ ಭಕ್ತರೂ ನಿತ್ಯರು." ಶ್ರೀರಾಮಕೃಷ್ಣರು ಈ ಬಗೆಯ ಇಂದ್ರಿಯಾತೀತ ಅನುಭವವನ್ನು, ತಮ್ಮ ನೀರು ಮತ್ತು ಮಂಜುಗಡ್ಡೆಯ ದೃಷ್ಟಾಂತವನ್ನು ವಿಸ್ತರಿಸಿ, ಹೀಗೆ ವಿವರಿಸುತ್ತಾರೆ: "ಆದರೆ, ಕೆಲವು ಭಕ್ತರ ಪ್ರಕಾರ, ಭಗವಂತನು ಅನಂತ ರೂಪಗಳನ್ನು ಹೊಂದುತ್ತಾನೆ. ಸಾಗರದಲ್ಲಿ ಕೆಲವು ಕಡೆಗಳಲ್ಲಿ ನೀರು ಕರಗುವುದೇ ಇಲ್ಲ. ಅದು ಸ್ಫಟಿಕದ ರೂಪವನ್ನು ತಾಳಿರುತ್ತದೆ."

ಇಷ್ಟದೇವತೆಯ ಕಲ್ಪನೆಗೆ ಸಂಬಂಧಪಟ್ಟ ಹಾಗೆ ಇನ್ನೊಂದು ಆಧ್ಯಾತ್ಮಿಕ ನಿಯಮವಿದೆ. ಅದೆಂದರೆ **ಇಷ್ಟಮಂತ್ರ**. ದೇವತಾಸ್ವರೂಪವಾಗಿರಲಿ ಅಥವಾ ಅವತಾರವಾಗಿರಲಿ, ಪ್ರತಿಯೊಂದು ಇಷ್ಟದೇವತೆಗೂ ಅದರದೇ ಆದ ಒಂದು ಇಷ್ಟಮಂತ್ರ ವಿರುತ್ತದೆ. ಮಂತ್ರವೆಂದರೆ ಏನು? "ಒಂದು ನಿರ್ದಿಷ್ಟ ದೇವತಾಸ್ವರೂಪದ ಇಂದ್ರಿಯಾತೀತ ಆಯಾಮವನ್ನು ಪ್ರಕಟಗೊಳಿಸುವ ಸಾಮರ್ಥ್ಯವಿರುವ ಪದಗಳ ವಿಶೇಷ ಸಮುಚ್ಚಯ." ಈ ಮಂತ್ರಗಳು ಋಷಿಗಳು ತಮ್ಮ ಧ್ಯಾನಗರ್ಭದಲ್ಲಿ ಆವಿಷ್ಕರಿಸಿದಂಥವು.

ಈ ವಿಷಯವನ್ನು ನಾವು ಏಕೆ ತಾನೇ ವಿಚಾರ ಮಾಡಿದೆವು? ಇದಕ್ಕೊಂದು ಕಾರಣವಿದೆ: ಲಕ್ಷಾಂತರ ಮಂದಿ ಶ್ರೀರಾಮಕೃಷ್ಣರನ್ನು ತಮ್ಮ ಇಷ್ಟದೇವತೆಯನ್ನಾಗಿ ಸ್ವೀಕರಿಸಿದ್ದಾರೆ. ಹೀಗಾಗಿ ನಾವು ಇಷ್ಟದೇವತೆಯ ಬಗ್ಗೆ ಹೇಳಿರುವ ವಿಚಾರಗಳು ಶ್ರೀರಾಮಕೃಷ್ಣರಿಗೂ ಅನ್ವಯಿಸುತ್ತವೆ. ಅವರಿಗೆ ಸಂಬಂಧಪಟ್ಟ ಮಂತ್ರಗಳು ವಿಕಾಸಹೊಂದಿವೆ ಮತ್ತು ಅವುಗಳನ್ನು ವ್ಯಾಪಕವಾಗಿ ಉಪಯೋಗಿಸಲಾಗುತ್ತಿದೆ. ಎಲ್ಲ ಅವತಾರಗಳೂ ಪರತತ್ತ್ವದ ಅಭಿವ್ಯಕ್ತಿಗಳಾಗಿರುವುದರಿಂದ ಅವೆಲ್ಲ ದಿವ್ಯವಾದುವು ಎಂದೇ ಹಿಂದೂಧರ್ಮದಲ್ಲಿ ಪರಿಗಣಿಸುತ್ತಾರೆ. ಹಾಗೆ ನೋಡಿದರೆ, ಹಿಂದೂಧರ್ಮದಲ್ಲಿ ಕಂಡುಬರುವ ಅವತಾರದ ಕಲ್ಪನೆಗೂ ಕ್ರೈಸ್ತಧರ್ಮದಲ್ಲಿ ಕಂಡುಬರುವ ಪ್ರವಾದಿಯ ಕಲ್ಪನೆಗೂ ಇದೇ ವ್ಯತ್ಯಾಸ. ಒಬ್ಬ ಪ್ರವಾದಿಯು ಭಗವಂತನ ಬಗೆಗಿನ ಅತೀಂದ್ರಿಯ ಸತ್ಯಗಳನ್ನು ಪ್ರಕಟಪಡಿಸುತ್ತಾನಷ್ಟೇ; ಆದರೆ ಆತನನ್ನೇ ಭಗವದಂಶವೆಂದು ಪರಿಗಣಿಸಲಾಗದು. ಆತನು ಭಗವಂತನ ಸಂದೇಶವಾಹಕ; ಮಾನವಜನಾಂಗದಲ್ಲಿ ಕಂಡುಬರುವ ಸಾಮಾನ್ಯ ಜನರಿಗಿಂತ ಅದೆಷ್ಟೋ ಪಟ್ಟು ಶ್ರೇಷ್ಠಮಟ್ಟದವನು.

ಶ್ರೀರಾಮಕೃಷ್ಣರ ಅವತಾರತ್ವದ ಬಗೆಗಿನ ಯಾವುದೇ ಚರ್ಚೆಯಲ್ಲಿ ಒಬ್ಬ ಇಷ್ಟದೇವತೆಯಾಗಿ ಅವರ ಸ್ಥಾನವನ್ನು ಲೆಕ್ಕಕ್ಕೆ ತಂದುಕೊಳ್ಳಲೇಬೇಕಾದ ಆವಶ್ಯಕತೆ ಇದೆ. ಅವರ ನೈಜ ವ್ಯಕ್ತಿತ್ವದ ಈ ಅಂಶವನ್ನು ಜನರ ಮೇಲೆ ಅಧಿಕಾರಯುಕ್ತವಾಗಿ ಹೇರುವ ಪ್ರಯತ್ನವೇನೂ ನಡೆದಿಲ್ಲ. ಜನರು ತಾವೇತಾವಾಗಿ, ಸಹಜವಾಗಿ ಶ್ರೀರಾಮಕೃಷ್ಣರನ್ನು ತಮ್ಮ ಇಷ್ಟದೇವತೆಯೆಂದು ಒಪ್ಪಿಕೊಳ್ಳುತ್ತಾರೆ. ಈ ಬಗೆಯ ಒಪ್ಪಿಗೆಯು ಜನರು ತಾವು ಹೊಂದಿರುವ ಯಾವುದೋ ಅನಿರ್ದಿಷ್ಟ ದಾರ್ಶನಿಕ ದೃಷ್ಟಿಯಿಂದ ಉಂಟಾದದ್ದು ಎಂದು ಹೇಳಬಹುದು. ಸ್ವಾರಸ್ಯವೆಂದರೆ ಇದರ ಬಗ್ಗೆ ಆ ಜನರಿಗೇ ಸರಿಯಾದ ಅರಿವು ಇರುವುದಿಲ್ಲ.

**ಓಂ ಹ್ರೀಂ ಋತಂ:** ಶ್ರೀರಾಮಕೃಷ್ಣರ ಬಗೆಗಿನ ತಮ್ಮ ಸಂಸ್ಕೃತ ಸ್ತೋತ್ರವನ್ನು 'ಓಂ ಹ್ರೀಂ ಋತಂ' ಎನ್ನುವ ಮೂರು ಪದಗಳ ಮೂಲಕ ಸ್ವಾಮಿ ವಿವೇಕಾನಂದರು ಆರಂಭಿಸುತ್ತಾರೆ. ಇಲ್ಲಿ 'ಓಂ' ಎನ್ನುವ ಪದವು ಪರಬ್ರಹ್ಮನ ವಿಶ್ವವ್ಯಾಪಕ ಆಯಾಮವಾದ ಅನಂತತೆಯ ದ್ಯೋತಕವಾಗಿದೆ. ಇದು ನಿರ್ಗುಣವಾಗಿರಬಹುದು ಅಥವಾ ಸಗುಣವೂ ಆಗಿರಬಹುದು.

ಮಾನವ ಅರಿವಿನ ಸೀಮಿತ ಕವಲುಗಳ ಮೂಲಕ ನೋಡಿದಾಗ, ಪರಬ್ರಹ್ಮದ ಅಖಂಡ ಮತ್ತು ವಿಶ್ವವ್ಯಾಪಕ ಆಯಾಮವು ಕೆಲವು ನಿರ್ದಿಷ್ಟ ದಿವ್ಯಸ್ವರೂಪಗಳು ಮತ್ತು ದೇವತಾರೂಪಗಳಾಗಿ ಕಾಣಬರುವುದನ್ನು ನಾವು ನೋಡುತ್ತೇವೆ. ಪರಬ್ರಹ್ಮನ ಈ ಖಂಡ ರೂಪಗಳನ್ನು ಕೆಲವು ನಿಗೂಢ ಪದಗಳ ಮೂಲಕ ಸಂಕೇತಿಸಲಾಗುತ್ತದೆ. ಅವುಗಳನ್ನು ಒಟ್ಟಾಗಿ **'ಬೀಜ'** ಎಂದು ಕರೆಯಲಾಗುತ್ತದೆ. ಬ್ರಹ್ಮನ ಈ ಖಂಡರೂಪವೇ ಶಿವ, ಕಾಳಿ, ವಿಷ್ಣು ಮತ್ತಿತರ ಮಾನವರೂಪಿ ದೇವದೇವತೆಗಳ ಸ್ವರೂಪವನ್ನೂ ತಳೆದುಕೊಂಡಿತು ಎಂದು ಹೇಳಬಹುದು. ಇದರ ಅರ್ಥ ಪ್ರತಿಯೊಂದು ದೇವತಾರೂಪವೂ ತನ್ನದೇ ಆದ ಒಂದು 'ಬೀಜ'